ಶಿಕ್ಷಣ ಇರಬಹುದು, ಇದಕ್ಕೆ ಸಮುದಾಯದ ಸಹಭಾಗಿತ್ವ ಖಂಡಿತ ಆಗಲೇಬೇಕು ಎನ್ನತಕ್ಕದ್ದನ್ನು ಒತ್ತಾಯ ಪೂರ್ವಕವಾಗಿ ಕೂಡ ನನ್ನ ಎಲ್ಲಾ ಚುನಾಯಿತ ಪ್ರತಿನಿಧಿಗಳು ಮತ್ತು ಜನತಂತ್ರ ವ್ಯವಸ್ಥೆಯಲ್ಲಿ ಪಾಲುದಾರರಾಗಿರುವ ತಮ್ಮಲ್ಲಿ ಕೂಡ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಪೂಜಾರಿಯವರೇ, ನಿಮ್ಮ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ. ಜೊತೆಗೆ ಮಾನ್ಯ ಆರೋಗ್ಯ ಸಚಿವರ ಹೆಸರಿನಲ್ಲಿ ಎರಡು ಮೂರು ಪ್ರಶ್ನೆಗಳು ಇವೆ. ಅವರ ವಿಚಾರ ತಮಗೆಲ್ಲಾ ಬಹುಶಃ ಗೊತ್ತಿರಬಹುದು. ಹೋದ ಸಲ ಅವರ ಮಗ ಆಕ್ಸಿಡೆಂಟ್‌ನಲ್ಲಿ ತೀರಿ ಹೋಗಿದ್ದಾರೆ. ಮಾನ್ಯ ಗೋಪಾಲ್ ಪೂಜಾರಿಯವರದ್ದು ಮುಂದೆ ತೆಗೆದುಕೊಳ್ಳೋಣ. ಅವರದ್ದು ಉತ್ತರ ಬಂದಿಲ್ಲ. ಆದಾದ ಮೇಲೆ ಶ್ರೀ ಪುಟ್ಟರಂಗನಾಥ್, ಶ್ರೀ ರಾಮಲಿಂಗಾರೆಡ್ಡಿ, ಶ್ರೀ ಯೋಗೀಶ್ ಭಟ್ ಇವರದ್ದು ಆಮೇಲೆ ತೆಗೆದುಕೊಳ್ಳೋಣ. ಮಾನ್ಯ ಮಲಕರೆಡ್ಡಿಯವರ ಮಗ ಕಾರು ಅಪಘಾತದಲ್ಲಿ ತೀರಿ ಹೋದರು. ಇವತ್ತು ಅವರದ್ದು ಹತ್ತನೇ ದಿನ ಎಂದು ಅವರು ಹೋಗಿದ್ದಾರೆ. ಅವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ನಾವು ಈ ಪ್ರಶ್ನೆಗಳನ್ನು ಮುಂದೆ ತೆಗೆದುಕೊಳ್ಳೋಣ, ಬೇರೆ ಏನೂ ಇಲ್ಲ.

ಶ್ರೀ ಎಸ್.ಎಚ್. ಪುಟ್ಟರಂಗನಾಥ್ : ನನ್ನ ಪ್ರಶ್ನೆ ಬಗ್ಗೆ ಹೋದ ಸಾರಿ ಹಾಗೆಯೇ ಹೇಳಿದ್ದರು.

ಅಧ್ಯಕ್ಷರು : ಖಂಡಿತವಾಗಿ ನಿಮ್ಮ ಪ್ರಶ್ನೆ ತೆಗೆದುಕೊಳ್ಳುತ್ತೇವೆ. ಈಗ ಪ್ರಶ್ನೆಗಳ ಪಟ್ಟಿಯಲ್ಲಿ ಹಾಕಿದ್ದೇವಲ್ಲ. ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ ಎಂದು ಏಕೆ ಹೇಳುತ್ತೀರಿ? ಮಾನ್ಯ ಆರೋಗ್ಯ ಮಂತ್ರಿಗಳ ಪರಿಸ್ಥಿತಿ ಈ ರೀತಿ ಇರುವುದರಿಂದ ಇವತ್ತು ತೆಗೆದುಕೊಳ್ಳುತ್ತಿಲ್ಲ. ಮುಂದಿನ ಬುಧವಾರ ಪ್ರಶ್ನೆ ಪಟ್ಟಿ ಇದೆಯಲ್ಲ ಅಂದು ಪುನಃ ತೆಗೆದುಕೊಳ್ಳುತ್ತೇನೆ. ಆ ನಂತರ ಮಾನ್ಯ ಪ್ರಭಾಕರ್ ಬಂಗೇರ ಅವರ ಪ್ರಶ್ನೆಗೆ ಉತ್ತರ ಬಂದಿಲ್ಲ. ಮಾನ್ಯ ಸದಾನಂದಗೌಡರು ಕೇಳಿದಂತಹ ಪ್ರಶ್ನೆಗೆ ಉತ್ತರ ಬಂದಿದೆ. ಅದನ್ನು ಅಮೇಲೆ ತೆಗೆದುಕೊಳ್ಳೋಣ.

ಶಿಕ್ಷಣ ಇಲಾಖೆಯಲ್ಲಿ ಕಂಪ್ಯೂಟರೀಕರಣ

533 - ಶ್ರೀ ಸಭಾಪತಿ. ಯು.ಆರ್. (ಉಡುಪಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳ ಕಛೇರಿ ಮತ್ತು ರಾಜ್ಯದ ಜಿಲ್ಲಾವಾರು ವಿದ್ಯಾಂಗ ಉಪನಿರ್ದೇಶಕರ ಕಛೇರಿಗಳ ಕಂಪ್ಯೂಟರೀಕರಣಗೊಳಿಸಿದ ಬಗ್ಗೆ ಮಾಹಿತಿಗಳನ್ನು ನೀಡುವುದು? (ಜಿಲ್ಲಾವಾರು ಮಾಹಿತಿ ನೀಡಿರಿ)

ಆ) ಶಿಕ್ಷಣ ಇಲಾಖೆಯನ್ನು ಗಣಕೀಕರಣ ಮಾಡುವಲ್ಲಿ ಸರ್ಕಾರಕ್ಕೆ ಇರುವ ಸಮಸ್ಯೆಗಳೇನು? ವಿವರ ನೀಡುವುದು?

ಶ್ರೀ ಎಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ ಸರ್ಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳ ಕಛೇರಿಯ

ವಿವಿಧ ಶಾಖೆಗಳಿಗೆ 36 ಕಂಪ್ಯೂಟರ್‌ಗಳನ್ನು ಖರೀದಿಸಿ ಅಳವಡಿಸಲಾಗಿದೆ. ರಾಜ್ಯದ ಹೊಸ 7 ಜಿಲ್ಲೆಗಳು ಸೇರಿದಂತೆ ಎಲ್ಲಾ 28 ಉಪ ನಿರ್ದೇಶಕರುಗಳ ಕಛೇರಿಗೆ ತಲಾ ಒಂದೊಂದು ಕಂಪ್ಯೂಟರ್‌ಗಳನ್ನು ನೀಡಲಾಗಿದೆ. (ಜಿಲ್ಲಾವಾರು ಉಪ ನಿರ್ದೇಶಕರ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಆ) ಶಿಕ್ಷಣ ಇಲಾಖೆಯ ಸಚಿವಾಲಯದ ಕಾರ್ಯದರ್ಶಿಯವರ ಕಛೇರಿ, ಆಯುಕ್ತರ ಕಛೇರಿಯನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮೊದಲನೆಯ ಹಂತದಲ್ಲಿ ಆಯ್ದ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಉಳಿದವರಿಗೂ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಈ ಕಛೇರಿಗಳಲ್ಲದೆ ರಾಜ್ಯದ 28 ಜಿಲ್ಲಾ ಉಪನಿರ್ದೇಶಕರುಗಳ ಕಛೇರಿ ಹಾಗೂ 190 ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ತಲಾ ಒಂದೊಂದು ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿದ್ದು, ಕಂಪ್ಯೂಟರ್‌ನಲ್ಲಿಯೇ ಕಛೇರಿ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಲಾಗಿದೆ. ಹಂತ ಹಂತವಾಗಿ ಕಛೇರಿಯ ಎಲ್ಲಾ ವ್ಯವಹಾರಗಳನ್ನು ಗಣಕೀಕರಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗಳಿಗೆ ಕಂಪ್ಯೂಟರ್‌ಗಳನ್ನು ಅಳವಡಿಸಿರುವ ಬಗ್ಗೆ ಜಿಲ್ಲಾವಾರು ವಿವರದ ಪಟ್ಟಿ.

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಕಂಪ್ಯೂಟರ್	ಪ್ರಿಂಟರ್	ಯು.ಪಿ.ಎಸ್.
1	2	3	4	5
1.	ಬೆಂಗಳೂರು ಉತ್ತರ	01	01	01
2.	ಬೆಂಗಳೂರು ದಕ್ಷಿಣ	01	01	01
3.	ಬೆಂಗಳೂರು ಗ್ರಾಮಾಂತರ	01	01	01
4.	ಕೋಲಾರ	00	01	01
5.	ತುಮಕೂರು	01	01	01
6.	ಶಿವಮೊಗ್ಗ	01	01	01
7.	ಚಿತ್ರದುರ್ಗ	01	01	01
8.	ದಾವಣಗೆರೆ	01	01	01
9.	ಮೈಸೂರು	01	01	01
10.	ಚಾಮರಾಜನಗರ	01	01	01

1	2	3	4	5
11.	ಮಂಡ್ಯ	01	01	01
12.	ಹಾಸನ	01	01	01
13.	ಚಿಕ್ಕಮಗಳೂರು	01	01	01
14.	ಕೊಡಗು	01	01	01
15.	ದಕ್ಷಿಣ ಕನ್ನಡ	01	01	01
16.	ಉಡುಪಿ	01	01	01
17.	ಬೆಳಗಾಂ	01	01	01
18.	ವಿಜಾಪುರ	01	01	01
19.	ಬಾಗಲಕೋಟೆ	01	01	01
20.	ಧಾರವಾಡ	01	01	01
21.	ಗದಗ್	01	01	01
22.	ಹಾವೇರಿ	01	01	01
23.	ಉತ್ತರ ಕನ್ನಡ	01	01	01
24.	ಗುಲ್ಬರ್ಗಾ	01	01	01
25.	ಬಳ್ಳಾರಿ	01	01	01
26.	ರಾಯಚೂರು	01	01	01
27.	ಕೊಪ್ಪಳ	01	01	01
28.	ಬೀದರ್	01	01	01

ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, 1999-2000ನೇ ಸಾಲಿನಲ್ಲಿ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳ ಕಛೇರಿಯ ವಿವಿಧ ಶಾಖೆಗಳಿಗೆ 36 ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇವತ್ತು ಈ ಕಂಪ್ಯೂಟರ್‌ಗಳು ಟೈಪ್‌ರೈಟರ್ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಸರ್ಕಾರದ ಧೋರಣೆ ಮಾಹಿತಿ ಯೋಜನೆ ಅನ್ವಯ ಈ ಶಿಕ್ಷಣ ಇಲಾಖೆಯ ಕಛೇರಿಗೆ ಸಾಫ್ಟ್ ವೇರನ್ನು ಡೆವಲಪ್ ಮಾಡಿದ್ದೀರಿ. ಹಾಗೆ ಮಾಡದೇ ಇದ್ದಲ್ಲಿ ಸಾಫ್ಟ್‌ವೇರನ್ನು ಯಾವಾಗ ಡೆವಲಪ್ ಮಾಡುತ್ತೀರಿ? ಆಮೇಲೆ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳಿಗೆ ಇಮೇಲ್ ವ್ಯವಸ್ಥೆ ಇದೆ. ಕಮೀಷನರ್‌ಗೂ ಇಮೇಲ್ ವ್ಯವಸ್ಥೆ ಇದೆ. ಶಿಕ್ಷಣ ಸಚಿವರಿಗೆ ವ್ಯವಸ್ಥೆ ಇಲ್ಲ. ಈ ಇಮೇಲ್ ವ್ಯವಸ್ಥೆಯನ್ನು ಯಾವಾಗ ಮಾಡುತ್ತೀರಿ?

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ನಾವು ನಮ್ಮ ಇಲಾಖೆಯ ಕಾರ್ಯದರ್ಶಿಯವರಿಗೆ, ಆಯುಕ್ತರಿಗೆ, ನಿರ್ದೇಶಕರುಗಳಿಗೆ ಮತ್ತು 190 ಬಿ.ಇ.ಓ. ಕಛೇರಿಗಳಿಗೂ ಕಂಪ್ಯೂಟರ್ ಹಾರ್ಡ್‌ವೇರ್‌ಗಳನ್ನು ಒದಗಿಸಿಕೊಟ್ಟಿದ್ದೇವೆ. ಸಾಫ್ಟ್‌ವೇರ್ ಇನ್ನೂ ಒದಗಿಸಿರುವುದಿಲ್ಲ. ಈಗ 'ಕನ್ನಡ ಕಚೇರಿ' ಎಂಬ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಸರ್ಕಾರ ಇದನ್ನು ಖರೀದಿಸುವುದಕ್ಕೆ ಪ್ರಯತ್ನಿಸುತ್ತಿದೆ. ನಮ್ಮಲ್ಲಿ ಮೂರು ಲಕ್ಷದಷ್ಟು ಸಿಬ್ಬಂದಿ ಇದ್ದು, ಸುಮಾರು ಐವತ್ತು ಸಾವಿರದಷ್ಟು ಶಾಲೆಗಳಿದ್ದು, ಒಂದು ಕೋಟಿ ಹತ್ತು ಲಕ್ಷ ಮಕ್ಕಳು ಮತ್ತು ಸುಮಾರು ಹದಿನೈದು ಲಕ್ಷ ಕುಟುಂಬಗಳು ಪಾಲ್ಗೊಂಡಿರುವುದರಿಂದ ಇದನ್ನು ಇನ್ನೂ ಹೆಚ್ಚಿಗೆ ವಿಸ್ತರಿಸಬೇಕಾಗಿರುವುದರಿಂದ ಒಂದು ವರ್ಷದ ಅವಧಿಯೊಳಗೆ ಇಲಾಖೆಯನ್ನು ಸಂಪೂರ್ಣವಾಗಿ ಗಣಕೀಕರಣದಲ್ಲಿಯೇ ಸಜ್ಜುಗೊಳಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ತಮ್ಮ ಉತ್ತರದಲ್ಲಿ 28 ಜಿಲ್ಲೆಗಳ ವಿವಿಧ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಕಂಪ್ಯೂಟರ್ ಸೌಲಭ್ಯವನ್ನು ಒದಗಿಸಿ ಕೊಟ್ಟಿದ್ದೇವೆಂದು ತಿಳಿಸಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಇ-ಮೇಲ್ ವ್ಯವಸ್ಥೆಯವರು ಜಾರಿಗೆ ತಂದರೆ ಬಹುಶಃ ನಾವು ಆಯುಕ್ತರೊಂದಿಗೆ, ಕಾರ್ಯದರ್ಶಿಯವರೊಂದಿಗೆ ನೇರವಾಗಿ ಸ್ಪಂದಿಸಲು ಸಾಧ್ಯವಾಗುತ್ತದೆ. ಈ ವ್ಯವಸ್ಥೆ ತರುವುದಕ್ಕೆ ಒಂದು ವರ್ಷ ಬೇಕಾಗುವುದಿಲ್ಲ, ಕೂಡಲೇ ಈ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದಾದ್ದರಿಂದ ದಯವಿಟ್ಟು ಇ-ಮೇಲ್ ವ್ಯವಸ್ಥೆಯನ್ನು ಜಾರಿಗೆ ತರುತ್ತೀರಾ?

ಶ್ರೀ ಹೆಚ್. ವಿಶ್ವನಾಥ್ : ಇ-ಮೇಲ್ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಯತ್ನಿಸುತ್ತೇನೆ.

ಬೆಂಗಳೂರು ಭಾರತಿನಗರದಲ್ಲಿ ಪ್ರೌಢ ಶಾಲೆಗೆ ಮಂಜೂರಾತಿ ನೀಡುವುದು

ಶ್ರೀ ಅಲೆಗ್ಸಾಂಡರ್. ಜೆ. (ಭಾರತಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಬೆಂಗಳೂರಿನ ಭಾರತೀನಗರ ಮತಕ್ಷೇತ್ರಕ್ಕೆ ಪ್ರೌಢಶಾಲೆ (ಆಂಗ್ಲ ಮತ್ತು ಕನ್ನಡ ಮಾಧ್ಯಮ) ಮಂಜೂರು ಮಾಡಲಾಗಿದೆಯೇ?*

ಆ) *ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಇ) *ಭಾರತೀನಗರ ಮತ ಕ್ಷೇತ್ರಕ್ಕೆ ಪ್ರೌಢಶಾಲೆಯನ್ನು ಮಂಜೂರು ಮಾಡಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಈಗಾಗಲೇ 2 ಕನ್ನಡ ಮಾಧ್ಯಮದ ಸರ್ಕಾರೀ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಅಲ್ಲದೇ ಈ ಕ್ಷೇತ್ರದಲ್ಲಿ 9 ಆಂಗ್ಲ ಮಾಧ್ಯಮದ ಅನುದಾನಿತ ಶಾಲೆಗಳು ಹಾಗೂ 3 ಅನುದಾನರಹಿತ ಆಂಗ್ಲ ಮಾಧ್ಯಮದ ಶಾಲೆಗಳಿದ್ದು, ಈ ಕ್ಷೇತ್ರಕ್ಕೆ ಮತ್ತೊಮ್ಮೆ ಪ್ರೌಢಶಾಲೆಯನ್ನು ಮಂಜೂರು ಮಾಡುವ ಅವಶ್ಯಕತೆ ಇರುವುದಿಲ್ಲ.